ಶ್ರೀ ಸಿ.ಆರ್. ಸಗೀರ್ ಅಹಮದ್ (ವಸತಿ ಸಚಿವರು)

ಅ. ಇಲ್ಲ.

ಆ. ಉದ್ಭವಿಸುವುದಿಲ್ಲ.

ಇ. ಉದ್ಭವಿಸುವುದಿಲ್ಲ.

ಈ. ಉದ್ಭವಿಸುವುದಿಲ್ಲ.

ಉ. ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಉರ್ದುಶಿಕ್ಷಣ ನಿದೇಶನಾಲಯ ಸ್ಥಾಪನೆ

1510(1868) ಶ್ರೀ ನಾಯಕ್. ಜೆ.ಡಿ. (ಭಟ್ಕಳ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿ ಉರ್ದು ಶಿಕ್ಷಣ ಪಡೆಯುವ ವಿದ್ಯಾರ್ಥಿಗಳಿಗೆ ಮಲತಾಯಿ ಧೋರಣೆ ಅನುಸರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ. ಉರ್ದು ಶಿಕ್ಷಣ ಅಭಿವೃದ್ಧಿ ಬಗ್ಗೆ ಉರ್ದು ಶಿಕ್ಷಣ ನಿರ್ದೇಶನಾಲಯ ಸ್ಥಾಪಿಸುವ ಬಗ್ಗೆ ಸರ್ಕಾರದ ಚಿಂತನೆ ಏನು?

ಪ್ರೋ. ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ. ಇಲ್ಲ

ಉರ್ದು ಶಾಲೆಗಳ ಆಡಳಿತದಲ್ಲಿ ಕೆಲವು ತೊಂದರೆಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ. ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ರಾಜ್ಯದಲ್ಲಿ ನೂತನ ಪ್ರೌಢ ಶಾಲೆಗಳ ಮಂಜೂರಾತಿ

1511(2040) ಶ್ರೀಮತಿ ಪಾರ್ವತಮ್ಮ ಶ್ರೀಕಂಠಯ್ಯ (ಶ್ರೀರಂಗಪಟ್ಟಣ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿ ಕಳೆದ ಸಾಲಿನಲ್ಲಿ ಹೊಸದಾಗಿ ಪ್ರೌಢಶಾಲೆಗಳನ್ನು ಪ್ರಾರಂಭಿಸಲಾಗಿದೆಯೇ; ಹಾಗಿದ್ದರೆ, ಎಷ್ಟು ಪ್ರೌಢಶಾಲೆಗಳು ಪ್ರಾರಂಭವಾದವು;

ಆ. ಶ್ರೀ ರಂಗಪಟ್ಟಣದ ಬೇವಿನಹಳ್ಳಿ ಮಹದೇವಪುರ, ಟಿ.ಎಂ. ಹೊಸೂರುಗಳಲ್ಲಿ ಹೊಸದಾಗಿ ಪ್ರೌಢಶಾಲೆಗಳು ಪ್ರಾರಂಭವಾಗಿದೆಯೇ; ಪ್ರಾರಂಭವಾಗಿಲ್ಲದಿದ್ದರೆ, ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ; ಇದ್ದಲ್ಲಿ ಯಾವಾಗ ಪ್ರಾರಂಭವಾಗುತ್ತದೆ.

ಇ. ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಎಷ್ಟು ಪ್ರಾಥಮಿಕ ಶಾಲಾ ಉಪಧ್ಯಾಯರುಗಳಿರುತ್ತಾರೆ; ಕೊರತೆ ಏನಾದರೂ ಇದೆಯೇ; ಇದ್ದಲ್ಲಿ, ತುಂಬುವ ಬಗ್ಗೆ ಕೈಗೊಂಡಿರುವ ಕ್ರಮವೇನು?

ಪ್ರೋ. ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ. ಹೌದು

134 ಪ್ರೌಢ ಶಾಲೆಗಳನ್ನು ಪ್ರಾರಂಭಿಸಲಾಗಿದೆ.

ಆ. ಬೇವಿನಹಳ್ಳಿ, ಮಹದೇವಪುರ, ಟಿ.ಎಂ. ಹೊಸೂರುಗಳಲ್ಲಿ ಹೊಸದಾಗಿ ಪ್ರೌಢಶಾಲೆ ಪ್ರಾರಂಭವಾಗಿರುವುದಿಲ್ಲ. ಮಹದೇವಪುರ ಗ್ರಾಮದಲ್ಲಿ ಪ್ರೌಢ ಶಾಲೆಯನ್ನು ಹೊಸದಾಗಿ ಪ್ರಾರಂಭಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಇ. ಈ ತಾಲ್ಲೂಕಿಗೆ 616 ಶಿಕ್ಷಕರ ಹುದ್ದೆ ಮಂಜೂರಾಗಿರುತ್ತದೆ. ಇದರಲ್ಲಿ 580 ಮಂದಿ ಶಿಕ್ಷಕರು ಕಾರ್ಯನಿರ್ವಹಿಸುತ್ತಿರುತ್ತಾರೆ. ಉಳಿದ 36 ಹುದ್ದೆಗಳು ಖಾಲಿ ಇರುತ್ತದೆ. ನೇಮಕಾತಿ: ಬಡ್ತಿ : ವರ್ಗಾವಣೆ ಮೂಲಕ ಸದರಿ ಖಾಲಿ ಹುದ್ದೆಗಳನ್ನು ಆದ್ಯತೆ ಮೇಲೆ ಭರ್ತಿ ಮಾಡಲಾಗುವುದು.

ರಾಜ್ಯದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಸ್ವಂತ ಕಟ್ಟಡ ನಿರ್ಮಾಣ

1512(2078) ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ (ತಿಕೋಟ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿ ಇರುವಂತಹ ಪ್ರಾಥಮಿಕ ಆರೋಗ್ಯ ಕೇಂದ್ರಗಳೆಷ್ಟು; (ಜಿಲ್ಲಾವಾರು ಪಟ್ಟಿ ಒದಗಿಸುವುದು)

ಆ. ರಾಜ್ಯದ ಎಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸ್ವಂತ ಕಟ್ಟಡ ಹೊಂದಿವೆ; ಎಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸ್ವಂತ ಕಟ್ಟಡ ಹೊಂದಿರುವುದಿಲ್ಲ.

ಇ. ಬಿಜಾಪುರ ಜಿಲ್ಲೆಯಲ್ಲಿ ಇರುವಂತಹ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಎಷ್ಟು ಕೇಂದ್ರಗಳು ಸ್ವಂತ ಕಟ್ಟಡ ಹೊಂದಿವೆ; ಎಷ್ಟು ಕೇಂದ್ರಗಳಿಗೆ ಸ್ವಂತ ಕಟ್ಟಡ ಇರುವುದಿಲ್ಲ; (ತಾಲ್ಲೂಕುವಾರು ಪಟ್ಟಿ ನೀಡುವುದು)

ಈ. ಹಾಗಿದ್ದರೆ ಕಟ್ಟಡಗಳನ್ನು ನಿರ್ಮಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಈ. ಈ ಬಗ್ಗೆ ನಿರ್ದಿಷ್ಟಪಡಿಸಲಾದ ಕಾಲಮಿತಿ ತಿಳಿಸಬಲ್ಲಿರಾ?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ. ರಾಜ್ಯದಲ್ಲಿ ಒಟ್ಟು 1676 ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ. (ಜಿಲ್ಲಾವಾರು ಪಟ್ಟಿ ಲಗತ್ತಿಸಿದೆ) ಅನುಬಂಧ- 1

ಆ. ರಾಜ್ಯದಲ್ಲಿ 1167 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸ್ವಂತ ಕಟ್ಟಡ ಹೊಂದಿದೆ. 510 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸ್ವಂತ ಕಟ್ಟಡ ಹೊಂದಿರುವುದಿಲ್ಲ.

ಇ. ಬಿಜಾಪುರ ಜಿಲ್ಲೆಯಲ್ಲಿ ಸ್ವಂತ ಕಟ್ಟಡ ಹೊಂದಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳು - 46

ಸ್ವಂತ ಕಟ್ಟಡ ಹೊಂದದೇ ಇರುವ ಪ್ರಾ. ಆ.ಕೇಂದ್ರಗಳು -11

(ತಾಲ್ಲೂಕುವಾರು ಪಟ್ಟಿ ಲಗತ್ತಿಸಿದೆ) ಅನುಬಂಧ -11

ಈ. ನಬಾರ್ಡ್ ನೆರವಿನ ಆರ್.ಐ.ಡಿ. ಎಫ್ ಯೋಜನೆಯಡಿಯಲ್ಲಿ ಬಿಜಾಪುರ ಜಿಲ್ಲೆಯ ಈ ಕೆಳಕಂಡ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ನಿರ್ಮಾಣ ಮಾಡಲು ಸರ್ಕಾರ ಉದ್ದೇಶಿಸಿದೆ.

1. ಹೊನಗನಹಳ್ಳಿ - ಬಿಜಾಪುರ ತಾ.